**ಜೊಯಕಿಮ್ ಮಾರಿಯಾ ಮಿಶಾಡೊ ಡಿ ಅಸೀಸ್** ಬ್ರೆಜಿಲ್‌ನ ಪ್ರಸಿದ್ಧ ಕಥೆಗಾರ. ಕವಿಯಾಗಿ, ನಾಟಕಕರರಾಗಿ ಸಾಹಿತ್ಯ ವಲಯದಲ್ಲಿ ಗುರುತಿಸಿಕೊಂಡವರು. ಬ್ರೆಜಿಲಿಯನ್ ಅಕಾಡೆಮಿ ಆಫ್ ಲೆಟರ್ಸ್ ಎಂಬ ಸಂಸ್ಥೆಯನ್ನು ಹುಟ್ಟುಹಾಕಿ ಅದರ ಅಧ್ಯಕ್ಷರಾಗಿ ದೀರ್ಘ ಕಾಲ ಕಾರ್ಯ ನಿರ್ವಹಿಸಿದರು. ಬ್ರೆಜಿಲ್‌ನಲ್ಲಿ ವಾಸ್ತವವಾದಿ ಚಳವಳಿಗೆ ರೂಪು ಕೊಟ್ಟವರು. ಜಗತ್ತಿನ ಕೆಲವೇ ಪ್ರಸಿದ್ಧ ಕಥೆಗಾರರ ಸಾಲಿನಲ್ಲಿ ನಿಲ್ಲುವ ಅವರು, ತಮ್ಮ ಕಾಲದ ಯುವಕರಿಗೆ ಸ್ಫೂರ್ತಿಯಾಗಿದ್ದರು. ಅವರು ಬರೆದ ಕಥೆ, ಕಾದಂಬರಿಗಳು ಜಗತ್ತಿನ ಅನೇಕ ಭಾಷೆಗಳಿಗೆ ಅನುವಾದಗೊಂಡಿವೆ. ಸಿನೆಮಾ ಮತ್ತು ನಾಟಕಗಳಾಗಿ ಜನರನ್ನು ತಲುಪಿವೆ

ಮುಗಿಸಿದಾಗ ಆಕೆ ಏನೂ ಹೇಳಲಿಲ್ಲ. ಕೆಲ ಕ್ಷಣಗಳು ಇಬ್ಬರೂ ಮೌನವಾಗಿಯೇ ಇದ್ದೆವು. ಆಮೇಲೆ ಆಕೆ ತಲೆಯೆತ್ತಿ, ಕೈಗಳನ್ನು ಮುಂದೆ ಗಂಟುಹಾಕಿ, ಗಲ್ಲವನ್ನು ಕೈಗಳ ಮೇಲೆ ಕೂಡಿಸಿ ಮೊಣಕೈಗಳನ್ನು ಕುರ್ಚಿಯ ಕೈಗಳ ಮೇಲೆ ಆನಿಸಿದಳು. ಅಷ್ಟೂ ಹೊತ್ತು ತನ್ನ ಸೂಕ್ಷ್ಮಗ್ರಹಿಕೆಯ ದೃಷ್ಟಿಯನ್ನು ನನ್ನ ಮೇಲೇ ಕೇಂದ್ರೀಕರಿಸಿಟ್ಟಿದ್ದಳು.

ಬಹುಶಃ ಅವಳಿಗೆ ಬೋರಾಗಿರಬಹುದು ಅಂದುಕೊಂಡು ಹೇಳಿದೆ: 'ಮೇಡಂ ಕೊನ್ಸಸಾಂವ್ ತುಂಬಾ ತಡವಾಗುತ್ತಿದೆ. ನಾನು....'

'ಇಲ್ಲ. ಇನ್ನೂ ಸಮಯವಿದೆ. ಈಗಷ್ಟೇ ಗಡಿಯಾರವನ್ನು ನೋಡಿದೆ. ಈಗಿನ್ನೂ ಹನ್ನೊಂದೂವರೆ. ಹೀಗೆ ಒಂದು ರಾತ್ರೆಯ ನಿದ್ದೆಯನ್ನು ಕಳಕೊಂಡರೆ ನಿನಗೆ ಮಾರನೆಯ ದಿನ ಎಚ್ಚರವಾಗಿರೋದಕ್ಕೆ ಆಗುತ್ತಾ?'

'ಹಿಂದೊಂದು ಸರ್ತಿ ಎದ್ದಿದ್ದೆ'

'ನಂಗೆ ಆಗೋದಿಲ್ಲ. ಒಂದು ರಾತ್ರೆ ನಿದ್ದೆ ಇಲ್ಲವಾದರೆ ಮಾರನೇ ದಿನ ಒಂದು ಅರ್ಧಗಂಟೆಯಾದರೂ ಮಲಗಬೇಕು. ನನ್ನ ಕಥೆ ಬೇರೆ. ನನಗೂ ವಯಸ್ಸಾಗ್ತಾ ಇದೆ'

'ಹಾಗೇನೂ ಇಲ್ಲ ಮೇಡಂ ಕೊನ್ಸಸಾಂವ್'

ನಾನು ಎಷ್ಟು ತೀವ್ರತೆಯಿಂದ ಮಾತಾಡಿದೆನೆಂದರೆ – ನನ್ನ ಮಾತುಗಳನ್ನು ಕೇಳಿ ಆಕೆ ಒಂದು ಕಿರುನಗೆಯನ್ನು ಬೀರಿದಳು. ಆಕೆ ಯಾವಾಗಲೂ ಶಾಂತಿಯಿಂದ ಸಾವಧಾನದಿಂದ ಇರುತ್ತಿದ್ದಳು. ಆದರೆ ಈಗ ಆಕೆ ಇದ್ದಕ್ಕಿದ್ದಂತೆ ಎದ್ದಳು. ಕೋಣೆಯ ಆಚೆಬದಿಗೆ ಗಡಿಬಿಡಿಯಿಂದ ನಡೆದಳು. ವಿಚಲಿತಳಾದಂತೆ ಗಂಡನ ಸ್ಟಡಿ ಮತ್ತು ಕಿಟಕಿಗಳ ನಡುವೆ ತನ್ನ ಪತಿವ್ರತೆಯ ಗತ್ತಿನಲ್ಲಿ ನಡೆದಳು. ಆಕೆ ಸಪೂರವಾಗಿದ್ದರೂ ನಡೆಯುವಾಗ ದೇಹದ ತೂಕವನ್ನು ಹೊರುತ್ತಿರುವಂತೆ ತುಸು ಅಡ್ಡಗಾಲು ಹಾಕುತ್ತಾ ನಡೆಯುತ್ತಿದ್ದಳು. ನನಗೆ ಆಕೆಯ ನಡಿಗೆಯ ಬಗ್ಗೆ ಈ ರೀತಿ ಭಾವನೆ ಎಂದೂ ಬಂದಿರಲಿಲ್ಲ. ನಡಿಗೆಯಲ್ಲಿ ಹಲವು ಬಾರಿ ನಿಂತು ಪರದೆಯನ್ನು ಪರೀಕ್ಷಿಸುತ್ತಾ, ಯಾವುದೋ ವಸ್ತುವಿದ್ದ ರೀತಿಯನ್ನು ಒಪ್ಪ ಮಾಡುತ್ತಾ, ಮುಂದುವರಿದು ನೇರ ನನ್ನ ಮುಂದೆ ಬಂದು ನಿಂತಳು. ನಮ್ಮಿಬ್ಬರ ನಡುವೆ ಒಂದು ಮೇಜಿತ್ತು. ಅವಳ ವಿಚಾರಗಳು ಪುನರಾವರ್ತನೆಗೊಂಡವು. ನಾನು ಎಚ್ಚರವಾಗಿದ್ದು ತಯಾರಾಗಿ ನಿಂತಿರುವುದು ಆಶ್ಚರ್ಯದ ವಿಷಯವೆಂದಳು. ನಾನು ಅವಳಿಗೆ ಈಗಾಗಲೇ ಗೊತ್ತಿದ್ದನ್ನು ಹೇಳದೆ – ನಗರದಲ್ಲಿ ಮಧ್ಯರಾತ್ರೆಯ ಸಾಮೂಹಿಕ ಪ್ರಾರ್ಥನೆಯನ್ನು ನೋಡೇ ಇರಲಿಲ್ಲವಾದ್ದರಿಂದ ಆ ಅವಕಾಶವನ್ನು ತಪ್ಪಸಲು ಇಷ್ಟವಿಲ್ಲವೆಂದೆ.

'ಬೇರೆ ಊರುಗಳ ಹಾಗೇ ಇಲ್ಲೂ ಪ್ರಾರ್ಥನೆಗಳು ನಡೆಯುತ್ತೆ. ಏನೂ ವಿಶೇಷವಿಲ್ಲ' ಅಂದಳು.

'ಇರಬಹುದು. ಆದರೆ ನಗರದಲ್ಲಿನ ಪ್ರಾರ್ಥನೆಯಲ್ಲಿ ಹೆಚ್ಚಿನ ಜನರಿರುತ್ತಾರೆ. ಹೆಚ್ಚಿನ ಗತ್ತಿರುತ್ತದೆ. ರಿಯೋದಲ್ಲಿ ಈ ಪವಿತ್ರ ವಾರ ಇತರೆಡೆಗಳಿಗಿಂತ ಭವ್ಯವಾಗಿರುತ್ತದೆ. ಸಂತ ಜಾನ್ ದಿನ ಅಥವಾ ಸಂತ ಅಂತೋನಿ ದಿನದ ಬಗ್ಗೆ ಗೊತ್ತಿಲ್ಲವಾಗಲೀ.....'

ಕ್ರಮಕ್ರಮೇಣ ಆಗೆ ಮುಂದಕ್ಕೆ ಬಗ್ಗಿ ತನ್ನ ಮೊಣಕೈಗಳನ್ನು ಮೇಜಿನ ಮೇಲೆ ಊರಿ, ತನ್ನ ಅಂಗೈಗಳ ನಡುವೆ ಮುಖವನ್ನು ಇಟ್ಟಳು. ಗುಂಡಿ ಹಾಕದ ರವಿಕೆಯ ಬಾಹುಗಳು ಸಹಜವಾಗಿ ಬಿದ್ದಾಗ ನನಗೆ ಆಕೆಯ ಬಿಳಿಯಾಗಿ ಆದರೆ ಅಂದುಕೊಂಡಷ್ಟು ಸಪೂರವಲ್ಲದ ಕೈಗಳು ಪೂರ್ಣವಾಗಿ ಕಂಡವು. ಆಕೆಯ ಬಾಹುಗಳನ್ನು ಪ್ರತಿನಿತ್ಯವಲ್ಲದಿದ್ದರೂ ಆಗಾಗ ಕಂಡಿದ್ದರೂ, ಈ ಬಾರಿ ಅದನ್ನು ಮೆಚ್ಚದಿರಲು ಆಗಲಿಲ್ಲ. ನರಗಳು ಎಷ್ಟು